ಹುಬ್ಬಳ್ಳಿ ವಿದ್ಯುತ್ ಸರಬರಾಜು
ಕಂಪನಿ ನಿಯಮಿತ
[ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ]
ಕಂಪನಿ ಕಾರ್ಯಾಲಯ
ನವನಗರ, ಹಳೇ ಪು.ಬೆಂ. ರಸ್ತೆ, ಹುಬ್ಬಳ್ಳಿ - 580 25

HUBLI ELECTRICITY SUPPLY COMPANY LIMITED
[Wholly owned Govt. of Karnataka undertaking]
Company Office,
Navanagar, Old P.B.Road, Hubballi-580025
E-mail ID: gmadmhr.hescom@gmail.com

Corporate Identity Number[CIN]: U31401KA2002SGC030437

ಓದಲಾಗಿದೆ:

1. ನಿರ್ದೇಶಕರು(ಆ ಮತ್ತು ಮಾಸಂ), ಕವಿಪ್ರನಿನಿ, ನಿಗಮ ಕಾರ್ಯಾಲಯದಿಂದ ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ ರವರಿಗೆ ಬರೆದ ಪತ್ರ ಸಂಖ್ಯೆ: ಕವಿಪ್ರನಿನಿ/ ಔ.ಬಾ/ ಹಿಸ7/ 11153/ 09-10, ದಿನಾಂಕ: 26.12.2013.
2. ನಿಯಂತ್ರಣಾಧಿಕಾರಿ(ಲೆಕ್ಕಗಳು ಮತ್ತು ಕಂದಾಯ), ಕಂಪನಿ ಕಾರ್ಯಾಲಯ, ಹುವಿಸಕಂನಿ., ಹುಬ್ಬಳ್ಳಿ ರವರ ಅಧಿಕೃತ ಜ್ಞಾಪನಾ ಸಂಖ್ಯೆ: HESCOM/ FA/ C(F&A)/ DCA(A/cs)/ AO(A/cs)/ F-122/ 2014-15/ CYS-1646, ದಿನಾಂಕ: 30.08.2014.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ ರವರ ಪತ್ರ ಸಂಖ್ಯೆ: ಕ.ವಿ.ಪ್ರ.ನಿ.ನೌ.ಸಂ/855/15-16, ದಿನಾಂಕ: 28.03.2016 ರಲ್ಲಿ ವೈಯಕ್ತಿಕ ಅಪಘಾತ ಗುಂಪು ವಿಮಾ ಯೋಜನೆಯನ್ನು ನವೀಕರಿಸಲು ಒತ್ತಾಯಿಸಿರುತ್ತಾರೆ.
4. ಅಧೀಕ್ಷಕ ಇಂಜಿನೀಯರ(ವಿ)(ಟಿ&ಪಿ), ಕಂಪನಿ ಕಾರ್ಯಾಲಯ, ಹುವಿಸಕಂನಿ., ಹುಬ್ಬಳ್ಳಿ ರವರ Letter Of Award Of Contract ಪತ್ರ ಸಂಖ್ಯೆ: HESCOM/ SEE(T&P)/ E-7/ AEE-3/ 17-18/ CYS-4097, ದಿನಾಂಕ: 05.12.2017.
5. ಹುವಿಸಕಂನಿ ಕಾರಕ ಟಿಪ್ಪಣಿ ಸಂಖ್ಯೆ:2712/13-14 ರ ಕಂಡಿಕೆ- ರಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಹುವಿಸಕಂನಿ., ರವರು ಅನುಮೋದಿಸಿರುವಂತೆ.

ಪೀಠಿಕೆ:

1. ಕವಿಪ್ರನಿನಿ/ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ/ ಅಧಿಕಾರಿಗಳಿಗೆ 2010-11 ನೇ ಸಾಲಿನಿಂದ ವೈಯಕ್ತಿಕ ಗುಂಪು ವಿಮಾ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ. ಕವಿಪ್ರನಿನಿ ಯಿಂದ ಜಾರಿಗೊಳಿಸಿರುವ ಈ ಯೋಜನೆಯು 2013-14 ನೇ ಸಾಲಿನಲ್ಲಿ ದಿನಾಂಕ: 29.03.2014 ಕ್ಕೆ ಅಂತ್ಯಗೊಂಡಿರುತ್ತದೆ. ಅಪಘಾತದಿಂದ ಮರಣ/ ಅಶಕ್ತತೆ ಹೊಂದಿದ ಸಿಬ್ಬಂದಿ/ ಅಧಿಕಾರಿಗಳಿಗೆ ಹಾಗೂ ಅವಲಂಬಿತರಿಗೆ ಸದರಿ ಯೋಜನೆ ಅಡಿಯಲ್ಲಿ ರೂ. 4,00,000/- ವಿಮಾ ಪರಿಹಾರವಾಗಿ ನೀಡುವ ಸೌಲಭ್ಯವನ್ನು ಒದಗಿಸಲಾಗಿರುತ್ತದೆ.
2. ವೈಯಕ್ತಿಕ ಗುಂಪು ವಿಮಾ ಯೋಜನೆಯ ಮೊತ್ತವು ಅಪಘಾತದಿಂದ ಮರಣ/ ಅಶಕ್ತತೆ ಹೊಂದಿದ ನೊಂದ ಸಿಬ್ಬಂದಿ/ ಅಧಿಕಾರಿಗೆ ಅಥವಾ ಕಾನೂನು ರೀತ್ಯ ಅವಲಂಬಿತರಿಗೆ ವಿಮಾ ಪಾವತಿ ಮೊತ್ತವು ತ್ವರಿತವಾಗಿ ಪಾವತಿಯಾಗಲೆಂಬ ಸಕಾರಣದಿಂದಾಗಿ 2014-15ನೇ ಸಾಲಿನಿಂದ, ಅಂದರೆ ದಿನಾಂಕ: 30.03.2014 ರಿಂದಲೇ ಜಾರಿಗೆ ಬರುವಂತೆ ಸದರಿ ಸೌಲಭ್ಯವನ್ನು ಕೆ.ಟಿ.ಪಿ.ಪಿ. ಅಧಿನಿಯಮ-1999 ರನ್ವಯ ಟೆಂಡರ್ ಪ್ರಕ್ರಿಯೆಗೊಳಿಸಿ, ಕವಿಪ್ರನಿನಿ ಯ ಸದರಿ ನಿರ್ದೇಶನದನ್ವಯ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತವು ಹೊಸದಾಗಿ, ಹುವಿಸಕಂನಿಯಿಂದ ವೈಯಕ್ತಿಕ ಗುಂಪು ವಿಮೆ ಯೋಜನೆಯನ್ನು ಪಡೆಯಲು ನಿರ್ಣಯಿಸಿದೆ.
3. ಕಂಪನಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಯತಕಾಲಿಕ ಎಲ್ಲಾ ಸಿಬ್ಬಂದಿ/ ಅಧಿಕಾರಿಗಳಿಗೆ, ಸದರಿ ವೈಯಕ್ತಿಕ ಗುಂಪು ವಿಮಾ ಯೋಜನೆ ಅಡಿಯಲ್ಲಿ ತರಲು ನಿಯಮಾವಳಿಗಳನುಸಾರ ಟೆಂಡರ್ ಪ್ರಕ್ರಿಯೆಯನ್ನು ದಿನಾಂಕ: 19.03.2014 ರಂದು ಪ್ರಾರಂಭಿಸಲಾಯಿತು.
4. ದಿನಾಂಕ: 16.09.2017 ರಂದು ಜರುಗಿದ ಮಂಡಳಿ ನಿರ್ದೇಶಕರುಗಳ 79ನೇ ಸಭೆಯಲ್ಲಿ ವಿಷಯ ಸಂಖ್ಯೆ: 27 ರ ನಿರ್ಣಯದಂತೆ, ಹುವಿಸಕಂನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ನಿಯತಕಾಲಿಕ ನೌಕರರು/ಅಧಿಕಾರಿಗಳಿಗೆ ನಾಲ್ಕು ಲಕ್ಷ ರೂಪಾಯಿ ವೈಯಕ್ತಿಕ ಅಪಘಾತ ಗುಂಪು ವಿಮೆ ಪಾಲಿಸಿಯನ್ನು ಮೆ|| ನ್ಯಾಷನಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ ರವರಿಗೆ

E:\G Drive\Enquiries (2017-18)\CR - 32, Group Personnel Insurance\20180125 - 1054 - Order for 2017-18.docx

ಪು.ತಿ.ನೋ.

ವಹಿಸಿಕೊಡಲು ಸದರಿ ಗುಂಪು ವಿಮೆ ಪ್ರೀಮಿಯಮ್ ಮೊತ್ತ ರೂ. 177.17 [ರೂಪಾಯಿ ಒಂದು ನೂರಾ ಎಪ್ಪತ್ತೇಳು ಹದಿನೇಳು ಮತ್ತು ಪೈಸೆ ಮಾತ್ರ) ಗಳನ್ನು (G.S.T ಒಳಗೊಂಡಂತೆ) ಸಂಬಂಧಪಟ್ಟ ಅಧಿಕಾರಿ/ನೌಕರರ ವೇತನದಲ್ಲಿ ಮುರುಗಡೆ ಮಾಡಿಕೊಳ್ಳಲು ನಿಲುವಳಿಗಳನ್ನು ಹೊರಡಿಸಲಾಗಿದ್ದಿರುತ್ತದೆ.

5. ಸದರಿ ಟೆಂಡರ ಪ್ರಕ್ರಿಯೆಯನ್ನು KTPP ಕಾಯ್ದೆಯ ನಿಯಮಾವಳಿಗಳನುಸಾರ ಪೂರ್ಣಗೊಳಿಸಿ, ಮೆ|| ನ್ಯಾಷನಲ್ ಇನ್ಶೂರನ್ಸ್ ಕಂಪನಿ ಲಿಮಿಟೆಡ್ ರವರ ಮೂಲಕ ಪಡೆಯಲು ಅಧೀಕ್ಷಕ ಇಂಜಿನೀಯರ(ವಿ)(ಟಿ&ಪಿ), ಕಂಪನಿ ಕಾರ್ಯಾಲಯ, ಹುವಿಸಕಂನಿ., ಹುಬ್ಬಳ್ಳಿ ರವರ Letter Of Award Of Contract ಪತ್ರ ದಿನಾಂಕ: 26.10.2017 ನ್ನು ಜಾರಿ ಮಾಡಲಾಗಿರುತ್ತದೆ.

6. ಮೆ|| ನ್ಯಾಷನಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ ರವರಿಂದ ಹುವಿಸಕಂನಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ನಿಯತಕಾಲಿಕ ಪ್ರತಿಯೊಬ್ಬ ಸಿಬ್ಬಂದಿ/ ಅಧಿಕಾರಿಗಳಿಗೆ ಗುಂಪು ವಿಮೆ ಯೋಜನೆ ಅಡಿಯಲ್ಲಿ ರೂ. 4,00,000/- (ರೂಪಾಯಿ ನಾಲ್ಕು ಲಕ್ಷ ಮಾತ್ರ) ವೈಯಕ್ತಿಕ ಅಪಘಾತ ವಿಮೆಯನ್ನು ಪಡೆಯಲಾಗಿದೆ. ಸದರಿ ವಿಮೆಯ ಕಂತನ್ನು ಹುವಿಸಕಂನಿ., ಕಂಪನಿ ಕಛೇರಿಯಿಂದ (ಆಂತರಿಕ ನಿರ್ವಹಣೆ ಶಾಖೆಯಿಂದ) ನಿಯಮಾನುಸಾರ ಪಾವತಿಸಲು ಕ್ರಮ ಜರುಗಿಸುವುದು; ಸದರಿ ಜೀವ ವಿಮಾ ಕಂತನ್ನು ಪಾವತಿಸಿದ ದಿನಾಂಕದಿಂದ ಮುಂದಿನ ಒಂದು ವರ್ಷದ ಅವಧಿಗೆ ವಿಮೆಯು ಜಾರಿಯಲ್ಲಿರುತ್ತದೆ.

7. ವಿಭಾಗೀಯ ವ್ಯವಸ್ಥಾಪಕರು, ನ್ಯಾಷನಲ್ ಇನ್ಶ್ಯೂರನ್ಸ್ ಕಂಪನಿ ಲಿ., ಹುಬ್ಬಳ್ಳಿ ರವರು ಒಟ್ಟು 9832 ಅಧಿಕಾರಿ/ ನೌಕರರ ಜೀವ ವಿಮಾ ಕಂತು ರೂ. 17,42,0004/-[ರೂಪಾಯಿ ಹದಿನೇಳು ಲಕ್ಷ ನಲವತ್ತೇಳು ಸಾವಿರದ ನಾಲ್ಕು ಮಾತ್ರ) ಗಳನ್ನು ಮುಂಗಡವಾಗಿ ಪಾವತಿಸುವಂತೆ ಪತ್ರ ಸಂಖ್ಯೆ: 60100/ MKTG/ 2017-18, ದಿನಾಂಕ: 24.01.2018 ರಲ್ಲಿ ಕೋರಿರುತ್ತಾರೆ.

8. ಮೆ|| ನ್ಯಾಷನಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ ರವರು ಹುವಿಸಕಂನಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ನಿಯತಕಾಲಿಕ ಪ್ರತಿಯೊಬ್ಬ ಸಿಬ್ಬಂದಿ/ ಅಧಿಕಾರಿಗಳಿಗೆ ಅಪಘಾತದಿಂದ ಮರಣ/ ಶಾಶ್ವತ ಸಂಪೂರ್ಣ ಅಂಗವೈಕಲ್ಯತೆ (ಅವಾರ್ಡ್'ದಲ್ಲಿನ ಕಂಡಿಕೆ-6ರಲ್ಲಿ ದಾಖಲಿಸಿದಂತೆ) ಸಂಭವಿಸಿದಲ್ಲಿ ಪರಿಹಾರವಾಗಿ ಗರಿಷ್ಠ ರೂ. 4,00,000/- (ರೂಪಾಯಿ ನಾಲ್ಕು ಲಕ್ಷ) ಗುಂಪು ವಿಮಾ ಯೋಜನೆಯಡಿಯಲ್ಲಿ ಪಡೆಯಲು ಒಟ್ಟು **ರೂ. 177.17/-** (ಪ್ರತಿಯೊಬ್ಬರಿಗೆ ಲೆಕ್ಕೀಕರಿಸಿದ ಒಟ್ಟು 9832 ಸಿಬ್ಬಂದಿ/ಅಧಿಕಾರಿಗಳ ಒಟ್ಟು ರೂ. 17,42,004/-) ಗಳನ್ನು ವಾರ್ಷಿಕ ಪ್ರೀಮಿಯಂ ಮೊತ್ತವನ್ನು ಒಮ್ಮೆ ಮಾತ್ರ ಪಾವತಿಸುವುದು.

9. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ನಿಯತಕಾಲಿಕ ಪ್ರತಿಯೊಬ್ಬ ಸಿಬ್ಬಂದಿ/ ಅಧಿಕಾರಿಗಳಿಗೆ ಅಪಘಾತದಿಂದ ಮರಣ/ ಶಾಶ್ವತ ಸಂಪೂರ್ಣ ಅಂಗವೈಕಲ್ಯತೆ ಸಂಭವಿಸಿದಾಗ, ಪರಿಹಾರವಾಗಿ ರೂ. 4,00,000/- (ರೂಪಾಯಿ ನಾಲ್ಕು ಲಕ್ಷ) ಗಳ ಗುಂಪು ವಿಮಾ ಪಾಲಿಸಿಯನ್ನು ವಿಮೆ ಕಂತು ಪಾವತಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಪಡೆಯಲು ಮೆ|| ನ್ಯಾಷನಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿರುತ್ತದೆ.

10. ಮೆ|| ನ್ಯಾಷನಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ ರವರು ದಿನಾಂಕ: 14.11.2017 ರಂದು "Contract Agreement" ನ್ನು ಸಲ್ಲಿಸಿದ್ದು; ಸದರಿ ಒಪ್ಪಂದವನ್ನು ಅಧೀಕ್ಷಕ ಇಂಜಿನೀಯರ(ವಿ)(ಟಿ&ಪಿ), ಹುವಿಸಕಂನಿ, ಕಂಪನಿ ಕಾರ್ಯಾಲಯ, ಹುಬ್ಬಳ್ಳಿ ರವರು ಮಾಡಿಕೊಂಡಿರುತ್ತಾರೆ.

11. ಮೆ|| ನ್ಯಾಷನಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ ರವರಿಂದ ಪಡೆಯಲಾದ, ಗುಂಪು ವಿಮೆ ಯೋಜನೆ ಅಡಿಯಲ್ಲಿ ರೂ. 4,00,000/- ವೈಯಕ್ತಿಕ ಅಪಘಾತ ವಿಮೆ ಪಡೆಯಲು ಈ ಕೆಳಗೆ ಕಾಣಿಸಿರುವಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ: ಹುವಿಸಕಂನಿ/ಪ್ರವ್ಯ(ಆ)/ಲೆ(ಸಿ)/ಸಲೆ(ಸಿ)/ಹಿಸ(ಎ)/ವಿಎ-32/2017-18/** C48-5247

ಹುಬ್ಬಳ್ಳಿ, ದಿನಾಂಕ: 29 **– ಜನೇವರಿ – 2018.**

1. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ಕಾರ್ಯ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ನಿಯತಕಾಲಿಕ ಪ್ರತಿಯೊಬ್ಬ ಸಿಬ್ಬಂದಿ/ ಅಧಿಕಾರಿಗಳ ಪರವಾಗಿ, ಗುಂಪು ವಿಮೆ ಯೋಜನೆ ಅಡಿಯಲ್ಲಿ ರೂ. 4,00,000/- (ರೂಪಾಯಿ ನಾಲ್ಕು ಲಕ್ಷ ಮಾತ್ರ) ವೈಯಕ್ತಿಕ ಅಪಘಾತ ವಿಮೆ ಪಡೆಯಲು ಹುವಿಸಕಂನಿಯು ಮೆ|| ನ್ಯಾಷನಲ್ ಇನ್ಶೂರೆನ್ಸ್

ಕಂಪನಿ ಲಿಮಿಟೆಡ್, 2ನೇ ಮಹಡಿ, ಅರಿಹಂತ ಪ್ಲಾಝಾ, ಕುಸುಗಲ್ ರಸ್ತೆ, ಕೇಶ್ವಾಪೂರ, ಹುಬ್ಬಳ್ಳಿ – 580 023 ಇವರಿಗೆ ವಾರ್ಷಿಕ ವಿಮಾ ಕಂತಿನ ಮೊತ್ತ (GST ಸೇರಿದಂತೆ) ರೂ. 17,42,004/- (ರೂಪಾಯಿಗಳು: ಹದಿನೇಳು ಲಕ್ಷ ನಲವತ್ತೆರಡು ಸಾವಿರದ ನಾಲ್ಕು ಮಾತ್ರ) ಗಳನ್ನು ನಿಯಮಾನುಸಾರ ಅವಾರ್ಡನಲ್ಲಿನ ಷರತ್ತು/ ನಿಬಂಧನೆಗೊಳಪಟ್ಟು ಆರ್.ಟಿ.ಜಿ.ಎಸ್. ಮುಖಾಂತರ ಮುಂಗಡವಾಗಿ ಕಂಪನಿ ಕಛೇರಿಯ ಆಂತರಿಕ ನಿರ್ವಹಣೆ ಶಾಖೆಯಿಂದ ಪಾವತಿ ಮಾಡಲು ಆದೇಶಿಸಿದೆ.

2. ಉಲ್ಲೇಖ(4) ರಲ್ಲಿನ ವಾರ್ಷಿಕ ವಿಮಾ ಕಂತಿನ ಮೊತ್ತ **177.17/-** (ರೂ. ಒಂದು ನೂರಾ ಹದಿನೇಳು ರೂಪಾಯಿ ಹದಿನೇಳು ಪೈಸೆ ಮಾತ್ರ) ಗಳನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ನಿಯತಕಾಲಿಕ ಪ್ರತಿಯೊಬ್ಬ ಸಿಬ್ಬಂದಿ/ ಅಧಿಕಾರಿಗಳ ಫೆಬ್ರವರಿ-**2018** ರ ಮಾಸಿಕ ವೇತನದಲ್ಲಿ**,** ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳು ಖಡ್ಡಾಯವಾಗಿ ಮುರಿಕೆ ಮಾಡುವುದು.

3. ಈ ಕುರಿತಂತೆ, ಈಗಾಗಲೇ ಸಿಬ್ಬಂದಿ/ ಅಧಿಕಾರಿಗಳ ವಿವರವನ್ನು ಕಂಪನಿ ಕಾರ್ಯಾಲಯಕ್ಕೆ ರವಾನಿಸಿದ್ದು; ಸದರಿ ಮಾಹಿತಿಯ ಮುಂದುವರೆದ ಭಾಗವಾಗಿ ವೇತನದಿಂದ ಮುರುಗಡೆಗೊಳಿಸಲಾದ ಅಂತಿಮ ವಿವರವನ್ನು ಅನುಬಂಧ ದಲ್ಲಿರುವ ನಮೂನೆ ಯಲ್ಲಿ ಭರ್ತಿ ಮಾಡಿ ಮೆದು ಪ್ರತಿಯನ್ನು(soft copy) 'gmadmhr.hescom@gmail.com' ಹಾಗೂ 'aopersonnel@gmail.com' ಇ-ಮೇಲ್ ಗೆ ಹಾಗೂ ಸಹಿಯಾದ ವಿವರಣಾ ಪಟ್ಟಿ[hard copy] ಯನ್ನು ದಿನಾಂಕ: 05.03.2018 ರೊಳಗಾಗಿ ಕಳುಹಿಸುವುದು.

4. ಹುವಿಸಕಂನಿಯ ಅಧೀನ ಕಛೇರಿಗಳು ತಮ್ಮ ಆಡಳಿತ ವ್ಯಾಪ್ತಿಯಲ್ಲಿನ ಸಿಬ್ಬಂದಿಯು ಅಪಘಾತದಲ್ಲಿ ಶಾಶ್ವತ ಸಂಪೂರ್ಣ ಅಂಗವೈಕಲ್ಯತೆ (ಅವಾರ್ಡ್‌ದಲ್ಲಿನ ಕಂಡಿಕೆ-6ರಲ್ಲಿ ದಾಖಲಿಸಿದಂತೆ)/ ನಿಧನ ಹೊಂದಿದಲ್ಲಿ ಕೂಡಲೇ "ಮಾನೇಜರ್, ನ್ಯಾಷನಲ್ ಇನ್ಸೂರನ್ಸ್ ಕಂಪನಿ ಲಿಮಿಟೆಡ್, 2ನೇ ಮಹಡಿ, ಅರಿಹಂತ ಪ್ಲಾಝಾ, ಕುಸುಗಲ್ ರಸ್ತೆ, ಕೇಶ್ವಾಪೂರ, ಹುಬ್ಬಳ್ಳಿ-23" ರವರಿಗೆ ನೇರವಾಗಿ ಮಾಹಿತಿ ನೀಡಿ, ನಂತರ 30 ದಿನಗಳೊಳಗಾಗಿ ಕ್ಲೈಮ್ ಫಾರಂನೊಂದಿಗೆ ಎಲ್ಲಾ ಅಗತ್ಯ ದಾಖಲಾತಿಗಳನ್ನು ದೃಢೀಕರಿಸಿ ವಿಮಾ ಪರಿಹಾರಕ್ಕಾಗಿ ಪ್ರಸ್ತಾವನೆಯನ್ನು ಮೇಲ್ಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು, ಹಾಗೂ ಪ್ರಸ್ತಾವದ ಪ್ರತಿಯನ್ನು ಈ ಕಛೇರಿಗೆ ಮಾಹಿತಿಗಾಗಿ ಸಲ್ಲಿಸುವುದು. ಈ ಸಂಬಂಧ ವಿಮಾ ಪರಿಹಾರಕ್ಕಾಗಿ ಅಗತ್ಯವಿರುವ ದಾಖಲಾತಿಗಳನ್ನು ವಿಮಾ ಕಂಪನಿಗೆ ಕಳುಹಿಸುವ ಹೊಣೆಗಾರಿಕೆಯು ಸಂಬಂಧಪಟ್ಟ ವಲಯ/ ವೃತ್ತ/ ವಿಭಾಗ ಕಛೇರಿಯದ್ದಾಗಿರುತ್ತದೆ.

5. ವೈಯಕ್ತಿಕ ಅಪಘಾತ ಗುಂಪು ವಿಮಾ ಯೋಜನೆಯ ಒಂದು ವರ್ಷದ ಅವಧಿಯ ಮಧ್ಯದಲ್ಲಿ ಯಾವುದೇ ಅಧಿಕಾರಿ/ ನೌಕರ ಯಾವುದೇ ವಿದ್ಯುತ್ ಸರಬರಾಜು ಕಂಪನಿ/ಕವಿಪ್ರನಿನಿಗೆ ವರ್ಗಾವಣೆ ಹೊಂದಿದ ನಂತರ ಅಪಘಾತದಿಂದ ಶಾಶ್ವತ ಸಂಪೂರ್ಣ ಅಂಗವೈಕಲ್ಯತೆ/ ನಿಧನ ಹೊಂದಿದಲ್ಲಿ ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿ/ ಕವಿಪ್ರನಿನಿಯು ಅಗತ್ಯ ದಾಖಲೆಗಳೊಂದಿಗೆ ವಿಮಾ ಪರಿಹಾರಕ್ಕಾಗಿ ಹುವಿಸಕಂನಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

6. ವಿಮಾ ಕಂಪನಿಗೆ ಮುಂಗಡವಾಗಿ ಪ್ರಿಮೀಯಂ ಮೊತ್ತವನ್ನು ಪಾವತಿ ಮಾಡುವ/ಲೆಕ್ಕೀಕರಿಸುವ ವಿಧಾನ;

ವಾರ್ಷಿಕ ಪ್ರೀಮಿಯಂ ಮೊತ್ತವನ್ನು ವಿಮಾ ಕಂಪನಿಗೆ ಮುಂಗಡವಾಗಿ ಪಾವತಿ ಮಾಡುವಾಗ, ಲೆಕ್ಕ ಶೀರ್ಷಿಕೆ 28.410 ಕ್ಕೆ ಖರ್ಚು ಹಾಕಿ ಕ್ರಮ ಜರುಗಿಸುವುದು. ಕಾರ್ಯಾದೇಶ ಹಾಗೂ ನಿಯಮಾವಳಿಗಳನುಸಾರ ಪ್ರೀಮಿಯಂ ಮೊತ್ತವನ್ನು ಮುಂಗಡವಾಗಿ ಪಾವತಿ ಮಾಡುವಾಗ 28.410 ಲೆಕ್ಕ ಶೀರ್ಷಿಕಗೆ ಲೆಕ್ಕೀಕರಿಸುವುದು. ಅದರಂತೆ, ಎಲ್ಲಾ ಲೆಕ್ಕಘಟಕಗಳಿಗೆ ಪಾವತಿಸಲಾದ ಮೊತ್ತದ ವಿವರಗಳನ್ವಯ ಲೆಕ್ಕಘಟಕಗಳವಾರು ಬೇರ್ಪಡಿಸಿ, ವರ್ಗಾವಣೆ ಆದೇಶದ ಮುಖಾಂತರ ಕಳುಹಿಸುವುದು.

37.1 - IUA - Other transactions/ adjustments-Debit AT sent.

TO 28.410 - Amount Recoverable from Employees towards Group Personnel Accident Insurance Policy.

7. ಆಯಾ ಲೆಕ್ಕ ಘಟಕಗಳಲ್ಲಿ ಅನುಸರಿಸುವ ವಿಧಾನ;

ಆಯಾ ಲೆಕ್ಕ ಘಟಕದಲ್ಲಿ, ಎಲ್ಲಾ ಅಧಿಕಾರಿ/ ಸಿಬ್ಬಂದಿಗಳ ವೇತನದಿಂದ ವಾರ್ಷಿಕ ಪ್ರೀಮಿಯಮ್ ಮೊತ್ತವನ್ನು ವೇತನದಿಂದ ಕಡಿತಗೊಳಿಸುವುದು.

**a.** ಕಂಪನಿ ಕಾರ್ಯಾಲಯದ ಆಂತರಿಕ ನಿರ್ವಹಣೆ ಶಾಖೆಯಿಂದ ಪಡೆಯಲಾದ ವರ್ಗಾವಣೆ ಆದೇಶವನ್ನು ಅಂಗೀಕರಿಸಲು

28.410 - Amount Recoverable from Employees towards Group Personnel Accident Insurance Policy.

TO 37.3 - IUA - Other transactions/ adjustments Clearance.

**b. ಅಧಿಕಾರಿ/ ಸಿಬ್ಬಂದಿಗಳಿಂದ ಪ್ರೀಮಿಯಂ ಮೊತ್ತವನ್ನು ವೇತನದಿಂದ ಮುರುಗಡೆ ಮಾಡಿಕೊಳ್ಳುವ ವಿಧಾನ.**

75.[Series] - Salaries

TO 28.410 - Amount Recoverable from Employees towards Group Personnel Accident Insurance Policy.

**c. ಕಂಪನಿ ಕಾರ್ಯಾಲಯದ ಆಂತರಿಕ ನಿರ್ವಹಣೆ ಶಾಖೆಯಲ್ಲಿ ವಿವಿಧ ಲೆಕ ಘಟಕಗಳಿಂದ ಬಂದಿರುವ 'ಸ್ವೀಕೃತ ಆದೇಶ' ವನ್ನು ಲೆಕ್ಕೀಕರಿಸುವ ವಿಧಾನ**

37.3 - IUA - Other transactions/ adjustments Clearance.

TO 37.1 - IUA - Other transactions/adjustments-Debit AT sent.

**ಟಿಪ್ಪಣಿ: ಸದರಿ ಕಾರ್ಯ ವಿಧಾನ ಕುರಿತು, ಯಾವುದೇ ಸ್ಪಷ್ಟನೆ ಬೇಕಾದಲ್ಲಿ, ಕಂಪನಿ ಕಾರ್ಯಾಲಯದ ಲೆಕ್ಕ ಶಾಖೆಗೆ ನೇರವಾಗಿ ಸಂಪರ್ಕಿಸುವುದು.**

ಆದೇಶದ ಮೇರೆಗೆ,

ಪ್ರಧಾನ ವ್ಯವಸ್ಥಾಪಕರು
(ಆಡಳಿತ ಮತ್ತು ಮಾ.ಸಂ.ಅ)

ಪ್ರತಿ:

1. ಮೆ|| ನ್ಯಾಷನಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್, 2ನೇ ಮಹಡಿ, ಅರಿಹಂತ ಪ್ಲಾಝಾ, ಕುಸುಗಲ್ ರಸ್ತೆ, ಕೇಶ್ವಾಪೂರ, ಹುಬ್ಬಳ್ಳಿ – 580 023.
2. ನಿರ್ದೇಶಕರು(ಆಡಳಿತ ಮತ್ತು ಮಾಸಂ), ಕವಿಪ್ರನಿನಿ ನಿಗಮ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು.
3. ನಿರ್ದೇಶಕರು(ತಾಂತ್ರಿಕ), ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ.
4. ಮುಖ್ಯ ಇಂಜಿನೀಯರ್(ವಿ), ವಲಯ ಕಛೇರಿ, ಹುವಿಸಕಂನಿ, ಹುಬ್ಬಳ್ಳಿ/ ಬೆಳಗಾವಿ.
5. ಮುಖ್ಯ ಆರ್ಥಿಕ ಅಧಿಕಾರಿ, ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ
6. ಆರ್ಥಿಕ ಸಲಹೆಗಾರರು (ಆಂ.ಪ), ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ
7. ಎಲ್ಲಾ ಅಧೀಕ್ಷಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಹುವಿಸಕಂನಿ, ____________
8. ನಿಯಂತ್ರಣಾಧಿಕಾರಿ (ಆಂ.ಪ/ ಲೆ&ಕಂ), ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ
9. ಎಲ್ಲಾ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಹುವಿಸಕಂನಿ, ____________
10. ಕಾರ್ಯನಿರ್ವಾಹಕ ಇಂಜಿನೀಯರ್(ವಿ)[ಮಾಹಿತಿ ತಂತ್ರಜ್ಞಾನ], ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ ಮಾಹಿತಿಗಾಗಿ ಹಾಗೂ ಸದರಿ ಆದೇಶವನ್ನು ಹುವಿಸಕಂನಿಯ ವೆಬ್-ಸೈಟ್ ಗೆ ತರಲು ಕ್ರಮ ಕೈಗೊಳ್ಳುವುದು.
11. ಆಪ್ತ ಕಾರ್ಯದರ್ಶಿ[ವ್ಯ.ನಿ.], ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ – ಮಾಹಿತಿಗಾಗಿ ಹಾಗೂ ಮಾನ್ಯರ ಅವಗಾಹನೆಗೆ ತರಲು ಕೋರಿದೆ.
12. ಲೆಕ್ಕಾಧಿಕಾರಿ, ಆಂತರಿಕ ನಿರ್ವಹಣೆ ಶಾಖೆ, ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
13. ಲೆಕ್ಕಾಧಿಕಾರಿ(ಆಂ.ತ, ಪಿ.ಟಿ.ಸಿ.)-3, ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
14. ಕಛೇರಿ ಕಡತ/ ಮಹಾ ಕಡತ.